| ವಿಧಾನ ಪರಿಷತ್ತು | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 990 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 15.12.2025 |
| ಉತ್ತರಿಸುವವರು | ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ, ಅರ್ಹ ಅರಣ್ಯ ಒತ್ತುವರಿದಾರರ ಪ್ರಕರಣಗಳನ್ನು ಪರಿಹರಿಸುವ ಸಲುವಾಗಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳನ್ನೊಳಗೊಂಡ ಜಂಟಿ ಮರು ಸರ್ವೆ ಮಾಡಿ, ಅರ್ಹ ಅರಣ್ಯ ಒತ್ತುವರಿದಾರರಿಗೆ ನ್ಯಾಯ ದೊರಕಿಸಿಕೊಡಲು ಸರ್ಕಾರ ತೆಗೆದುಕೊಂಡ ಕ್ರಮವೇನು; | ದಿನಾಂಕ 27.04.1978ರ ಪೂರ್ವದಲ್ಲಿ ಆಗಿರುವ ಅರಣ್ಯ ಒತ್ತುವರಿ ಪ್ರಕರಣಗಳ ಕುರಿತು ರಾಜ್ಯ ಸರ್ಕಾರವು ಪತ್ರ ಸಂಖ್ಯೆ. ಎಫ್‌ಇಇ 5 ಎಫ್‌ಜಿಎಲ್ 90/1 ದಿನಾಂಕ:16.07.1995 ರಂದು ಒಟ್ಟು 17,007.23 ಹೆ. ಪ್ರದೇಶವನ್ನು ಸಕ್ರಮಗೊಳಿಸುವ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br><br>ಅದರಂತೆ, ಸದರಿ ಪ್ರಸ್ತಾವನೆ ಕುರಿತು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ರವರ ಪತ್ರ ಸಂಖ್ಯೆ.ನಂ.8-50/95-FC ದಿನಾಂಕ: 15.05.1996ರಲ್ಲಿ ಒಟ್ಟು 19,348 ಪ್ರಕರಣಗಳಲ್ಲಿ 14,848.83 ಹೆ. ಅರಣ್ಯ ಭೂಮಿಯನ್ನು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಕಲಂ-2ರನ್ವಯ ಸಕ್ರಮಗೊಳಿಸಲು ಕೆಲವು ಷರತ್ತುಗಳಿಗೆ ಒಳಪಟ್ಟು ಆದೇಶಿಸಲಾಗಿರುತ್ತದೆ.<br><br>ಮುಂದುವರೆದು, ಕೇಂದ್ರ ಸರ್ಕಾರದ ಅನುಮೋದನೆ ಮೇರೆಗೆ ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 5 ಎಫ್ ಜಿಎಲ್ 90 ದಿನಾಂಕ: 05.05.1997ರನ್ವಯ ಅರಣ್ಯ ಒತ್ತುವರಿ ಪ್ರಕರಣಗಳಿಗೆ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುತ್ತದೆ. ಈ ಷರತ್ತುಗಳನ್ವಯ ಜಿಲ್ಲಾಧಿಕಾರಿಗಳು ಅರ್ಹ ಅರಣ್ಯ ಒತ್ತುವರಿದಾರರು ಹಾಗೂ ಒತ್ತುವರಿದಾರರಿಗೆ ಅನ್ವಯಿಸುವ ವಿಸ್ತೀರ್ಣವನ್ನು ಗುರುತಿಸಬೇಕಾಗಿತ್ತು. ಆದರೆ ಗುರುತಿಸುವಿಕೆಯ ಕಾರ್ಯವು ಸಂಪೂರ್ಣಗೊಂಡಿರುವುದಿಲ್ಲ.<br><br>ಕೇಂದ್ರ ಸರ್ಕಾರದ ಪತ್ರದಲ್ಲಿ ತಿಳಿಸಿದ ಷರತ್ತುಗಳಲ್ಲಿ, ಪ್ರಮುಖವಾದ ಷರತ್ತು, ಅರ್ಹ ಅರಣ್ಯ ಒತ್ತುವರಿಗಳಿಗೆ ಸಂಬಂಧಿಸಿದಂತೆ ಸಕ್ರಮಗೊಳಿಸುವ ಅರಣ್ಯ ಪ್ರದೇಶಗಳ ಪರ್ಯಾಯವಾಗಿ ಸಮನಾಂತರ ಪರಿಹಾರಾತ್ಮಕ ನೆಡುತೋಪುಗಳಾಗಿ ಅರಣ್ಯೇತರ ಪ್ರದೇಶಗಳನ್ನು ಗುರುತಿಸಿ, ಕರ್ನಾಟಕ ಅರಣ್ಯ ಕಾಯ್ದೆ-1963ರಡಿ ಮೀಸಲು/ರಕ್ಷಿತ ಅರಣ್ಯ ಎಂದು ಅಧಿಸೂಚಿಸುವುದು ಅಗತ್ಯವಿರುತ್ತದೆ. ಇದರೊಂದಿಗೆ, ಪರಿಹಾರಾತ್ಮಕ |
| ಆ) | ಭೂ ಮಂಜೂರಾತಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇತರ ಕಾನೂನಾತ್ಮಕ ನಿಯಮಗಳಡಿಯಲ್ಲಿ ಈ ಹಿಂದೆ ಮಂಜೂರಾದ ಎಲ್ಲಾ ಅರಣ್ಯ ಭೂಮಿಯನ್ನು "Denotification" ಮಾಡದೇ ಇರುವುದರಿಂದ ಇಂದಿಗೂ ಇಂತಹ ಮಂಜೂರಾತಿಗಳು ಕರ್ನಾಟಕ ಅರಣ್ಯ ಇಲಾಖೆಯ ದಾಖಲೆಗಳಲ್ಲಿ "ಅರಣ್ಯ" ಎಂಬುದಾಗಿ ಮುಂದುವರೆಸಿಕೊಂಡು ಬರಲಾಗುತ್ತಿರುವುದರಿಂದ, ಭೂ ಮಂಜೂರಾತಿದಾರರು ಸಮಸ್ಯೆಗೆ ಒಳಗಾಗಿದ್ದು ಅದನ್ನು ಪರಿಹರಿಸಲು ಸರ್ಕಾರ ಇದುವರೆಗೆ ತೆಗೆದುಕೊಂಡ ಕ್ರಮವೇನು; | |
| ಇ) | ಸದರಿ ಭೂ ಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ನಿಲುವೇನು; ಹಾಗೂ ಕೈಗೊಂಡಿರುವ ಪರಿಹಾರ ಕ್ರಮಗಳೇನು? | |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ನೆಡುತೋಪು ಪ್ರದೇಶಗಳಲ್ಲಿ ನೆಡುತೋಪುಗಳನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.<br>ಇದಲ್ಲದೇ, ಈ ಮೇಲೆ ನಮೂದಿಸಿರುವ ಕೇಂದ್ರ ಸರ್ಕಾರದ ಆದೇಶದಲ್ಲಿ ಕೆಲವೊಂದು ಷರತ್ತುಗಳನ್ನು ಕ್ಷೇತ್ರಮಟ್ಟದಲ್ಲಿ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ. ಉದಾಹರಣೆಗೆ:<br><br>"Regularization of encroachments will not be done in favour of encroachers in the midst of Forest area, steep slopes or in the wildlife sanctuaries, national parks etc., Such encroachers are to be relocated on the fringe of the forest for which excess area available with eligible encroachers may be utilized"<br><br>ಮುಂದುವರೆದು, ಅರಣ್ಯ ಒತ್ತುವರಿ ಪ್ರದೇಶಗಳನ್ನು ಸಕ್ರಮಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ-1963ರ ಕಲಂ-28ರಲ್ಲಿ ಡಿ-ನೋಟಿಫೈ/ಡಿ-ರಿಸರ್ವ್ ಮಾಡಬೇಕಾಗಿರುತ್ತದೆ. ಆದರೆ ಈ ಮಧ್ಯೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 13.11.2000ರಲ್ಲಿ, IA No.2 in WP No.337/1995 and again reiterated by the Supreme Court on 09.02.2004 in IA No.16 that "....... Pending further orders, no de-reservation of Forests/Sanctuaries/National Parks shall be effected" ಎಂದು ಆದೇಶಿಸಿರುತ್ತದೆ.<br><br>ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಜಿಲ್ಲಾಧಿಕಾರಿಗಳು ಗುರುತಿಸಿರುವ ಪ್ರಕರಣಗಳ ಸಮಗ್ರ ಪ್ರಸ್ತಾವನೆಯನ್ನು ಮಧ್ಯಂತರ ಅರ್ಜಿ (I.A) ಮುಖಾಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿ, ಸಂಬಂಧಿಸಿದ ಅರಣ್ಯ ಪ್ರದೇಶವನ್ನು ಡಿ-ರಿಸರ್ವ್/ಡಿ-ನೋಟಿಫೈ ಮಾಡಲು ಅನುಮತಿಯನ್ನು ಕೋರಲಾಗುವುದು. ಮುಂದುವರೆದು, ಈ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: FEE/191/FGL/2025**

**(ರಾಮಲಿಂಗಾರೆಡ್ಡಿ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.